ಸಂಪುಟ 01 | ಸಂಚಿಕೆ 137 | ಸೋಮವಾರ 06 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1. ಅಂತರಾಷ್ಟ್ರೀಯ ಕ್ರೀಡೆ ಮತ್ತು ಶಾಂತಿ ದಿನ**
**(International Day of Sport for Development and Peace)**

ಈ ದಿನವನ್ನು ಪ್ರತಿ ವರ್ಷ ಏಪ್ರಿಲ್ 6ರಂದು ಆಚರಿಸಲಾಗುತ್ತದೆ. ಕ್ರೀಡೆಯ ಮೂಲಕ ಶಾಂತಿ, ಸಹಕಾರ, ಸಮಾನತೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವುದು ಇದರ ಉದ್ದೇಶ.
ಯುವಜನರಲ್ಲಿ ಆರೋಗ್ಯಕರ ಜೀವನಶೈಲಿ ಮತ್ತು ತಂಡಭಾವವನ್ನು ಬೆಳೆಸಲು ಈ ದಿನ ಮಹತ್ವದ್ದಾಗಿದೆ.
ವಿಶ್ವದಾದ್ಯಂತ ಕ್ರೀಡಾ ಕಾರ್ಯಕ್ರಮಗಳು, ಜಾಗೃತಿ ಕಾರ್ಯಕ್ರಮಗಳು ನಡೆಯುತ್ತವೆ.

**2) ಬಿಜೆಪಿ ಸಂಸ್ಥಾಪನಾ ದಿನ (Bharatiya Janata Party)**

ಭಾರತೀಯ ಜನತಾ ಪಕ್ಷ (BJP) ಏಪ್ರಿಲ್ 6, 1980 ರಂದು ಸ್ಥಾಪಿತವಾದ ಭಾರತದ ಪ್ರಮುಖ ಬಲಪಂಥೀಯ ರಾಜಕೀಯ ಪಕ್ಷವಾಗಿದೆ. 1951 ರಲ್ಲಿ ಶ್ಯಾಮ ಪ್ರಸಾದ್ ಮುಖರ್ಜಿ ಸ್ಥಾಪಿಸಿದ ಭಾರತೀಯ ಜನಸಂಘದ (BJS) ಮುಂದುವರಿದ ಭಾಗವಾಗಿ, ಹಿಂದೂ ರಾಷ್ಟ್ರೀಯತೆ, ಸಾಂಸ್ಕೃತಿಕ ರಾಷ್ಟ್ರೀಯತೆ ಮತ್ತು "ಒಂದು ದೇಶ, ಒಂದು ಸಂವಿಧಾನ" ಎಂಬ ಸಿದ್ಧಾಂತಗಳೊಂದಿಗೆ ಇದು ಅಟಲ್ ಬಿಹಾರಿ ವಾಜಪೇಯಿ ಮತ್ತು ಎಲ್. ಕೆ. ಅಡ್ವಾಣಿಯವರ ನೇತೃತ್ವದಲ್ಲಿ ಬೆಳೆದು ಬಂತು.

## ಸುಭಾಷಿತ

ದುಡಿ, ಮೈ ಮುರಿದು ದುಡಿ, ಹೆಚ್ಚು
ಹೆಚ್ಚಾಗಿ ದುಡಿ, ಆ ನಿನ್ನ ದುಡಿಮೆಯಲ್ಲಿ
ಕ್ರಮ. ನಿಯಮ, ಗುರಿ, ದಕ್ಷತೆ ಇರಲಿ.

-ಸರ್ ಎಂ ವಿಶ್ವೇಶ್ವರಯ್ಯ

ಸುದ್ದಿ ಹಾಗೂ ಜಾಹಿರಾತಿಗಾಗಿ ಸಂಪರ್ಕಿಸಿ
9902277588, 9880707587, 9008787586

# ಕನ್ನಡದ ಉಳಿವಿಗಾಗಿ ಹೋರಾಡುವ ಅಶ್ರಫ್ ಗೆ ಮತನೀಡಿ: ಸಿಎಂ ಸಿದ್ಧರಾಮಯ್ಯ

**ನೈಜ್ಯ ದೇಸೆ ನ್ಯೂಸ್**




ಮಂಜೇಶ್ವರ(ಕೇರಳ): ಕನ್ನಡದ ಉಳಿವಿಗಾಗಿ ಹೋರಾಡುವ ಕಾಂಗ್ರೆಸ್ ಬೆಂಬಲಿತ ಯುಡಿ-ಎಫ್ ಅಭ್ಯರ್ಥಿ, ಹಾಲಿ ಶಾಸಕ ಅಶ್ರಫ್ ಅವರನ್ನು ಜನರು ಬಹುಮತದೊಂದಿಗೆ ಗೆಲ್ಲಿಸುವ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದ್ದಾರೆ.ಕೇರಳ ವಿಧಾನಸಭಾ ಚುನಾವಣೆಯ ಅಂಗವಾಗಿ ಮಂಜೇಶ್ವರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.ಮಂಜೇಶ್ವರದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಯುಡಿ-ಎಫ್ ಅಭ್ಯರ್ಥಿಯಾದ ಶಾಸಕ ಅಶ್ರಫ್ ಅವರು ಈ ಹಿಂದೆಯೂ ಆಯ್ಕೆಯಾಗಿ ಜನಸೇವೆ ಸಲ್ಲಿಸಿದ್ದಾರೆ. ಈ ಬಾರಿಯೂ ಅವರಿಗೆ ಜನ ಆರ್ಶೀವಾದ ಮಾಡಬೇಕೆಂದು ಕೋರುತ್ತೇನೆ ಎಂದರು. ಮಂಜೇಶ್ವರಕ್ಕೆ ಬಂದರೆ ಕನ್ನಡ ನೆಲದಲ್ಲೇ ಇರುವಂತೆ ಭಾಸವಾಗುತ್ತದೆ. ಕನ್ನಡ ಭಾಷಿಕರು ಹೆಚ್ಚಿರುವ ಪ್ರದೇಶವಾಗಿರುವ ಮಂಜೇಶ್ವರವು ಗೋವಿಂದ ಪೈರಂತಹ ಅನೇಕ ಸಾಹಿತ್ಯ ದಿಗ್ಗಜರು ಈ ನೆಲದಿಂದ ಹೊರಹೊಮ್ಮಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಕೇರಳ ರಾಜ್ಯದಲ್ಲಿಯೂ ಕನ್ನಡದ ಉಳಿವಿಗೆ ಕಾರಣ-ರಾಗಿರುವ ಇಲ್ಲಿನ ಜನರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.2019 ರಲ್ಲಿ ಪುದುಚೆ-ರಿಗೆ ನಾನು ಭೇಟಿ ನೀಡಿದ್ದೆ. ಈಗ ಪಕ್ಷದ ವ-ರಿಷ್ಠರ ತೀರ್ಮಾನದಂತೆ ಮತಯಾಚನೆಗೆ ಬಂದಿದ್ದು, ಕಾಂಗ್ರೆಸ್ ಬೆಂಬಲಿತ ಯುಡಿ-ಎಫ್ ಅಭ್ಯರ್ಥಿಯನ್ನು ಜನರು ಖಂಡಿತವಾಗಿ ಗೆಲ್ಲಿಸುವರೆಂಬ ವಿಶ್ವಾಸವಿದೆ. ಕನ್ನಡದ ಉಳಿವಿಗಾಗಿ ಹೋರಾಡುವ ಅಶ್ರಫ್ ರವರನ್ನು ಇಲ್ಲಿನ ಕನ್ನಡಿಗರು ಒಕ್ಕೊರಲಿನಿಂದ ಮತನೀಡಿ ಬೆಂಬಲಿಸಬೇಕು ಎಂದರು.ಕೇರಳದಲ್ಲಿ ಬಿಜೆಪಿಗೆ ಸ್ಥಾನವಿಲ್ಲ. ಏಕೆಂದರೆ ಬಿಜೆಪಿಯವರು ರೈತರ, ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ, ಮಹಿಳೆಯರ ವಿರೋಧಿಗಳು. ಬಿಜೆಪಿಯವ-ರಿಗೆ ಯಾವುದೇ ಸಿದ್ಧಾಂತವಿಲ್ಲ. ಶ್ರೀಮಂತರು, ಮೇಲ್ವರ್ಗದವರು, ಮತ್ತು ಕಾರ್ಪೊರೇಟ್ ಸಂಸ್ಥೆಗಳ ಪರವಾಗಿ ಬಿಜೆಪಿಯಿದೆ ಎಂದರು. ಕೇರಳದಲ್ಲಿಯೂ ಇಂದಿರಾ ಗ್ಯಾರಂಟಿಗಳನ್ನು ಘೋಷಿಸಲಾಗಿದೆ. ಉಚಿತ ಪ್ರಯಾಣ ಮಾಡುವ ಈ ಯೋಜನೆಯಿಂದ ಜನರಿಗೆ ಹಣ ಉಳಿತಾಯವಾಗಲಿದೆ. ಆರ್ಥಿಕತೆಯಲ್ಲಿ ಯೂನಿವರ್ಸಲ್ ಬೇಸಿಕ್ ಇನ್‌ಕಂ ತತ್ವದಂತೆ ತಳಸಮುದಾಯದವರಿಗೆ ಆರ್ಥಿಕ ನೆರವು ನೀಡಿದರೆ, ಆ ಹಣ ವ್ಯರ್ಥವಾಗುವುದಿಲ್ಲ. ಶಕ್ತಿ ಯೋಜನೆಯಿಂದ ಉಳಿತಾಯವಾಗುವ ಹಣದಿಂದ ಮಹಿಳೆಯರ ಖರೀದಿ ಮಾಡುವ ಶಕ್ತಿ ಹೆಚ್ಚಾಗುತ್ತದೆ. ಗೃಹಲಕ್ಷ್ಮಿ ಯೋಜನೆಯಡಿ 1ಕೋಟಿ .26 ಲಕ್ಷ ಮಹಿಳೆಯರಿಗೆ ತಿಂಗಳಿಗೆ 2000 ರೂ. ಗಳನ್ನೂ ಒದಗಿಸಲಾಗುತ್ತಿದೆ ಎಂದರು.ಬಿಜೆಪಿಗೆ ಇಂಥ ಜನಪರ ಯೋಜನೆಗಳನ್ನು ರೂಪಿಸಿ ಗೊತ್ತಿಲ್ಲ. ಆದರೆ ಮಹಾರಾಷ್ಟ್ರ ರಾಜ್ಯದಲ್ಲಿ ಈ ಯೋಜನೆಗಳನ್ನು ನಕಲು ಮಾಡಿದ್ದಾರೆ. ಕೇರಳ ರಾಜ್ಯ ಕೂಡ ನುಡಿದಂತೆ ನಡೆಯಲಿದೆ ಎಂಬ ನಂಬಿಕೆ ವಿಶ್ವಾಸವಿದ್ದರೆ ಯುಡಿಎಫ್ ಅಭ್ಯರ್ಥಿ ಅಶ್ರಫ್ ಅವರಿಗೆ ಮತ ಹಾಕಬೇಕು ಎಂದರು. ದೇಶಡೆಲ್ಲೆಡೆ ನಿರುದ್ಯೋಗ ಸಮಸ್ಯೆ ಇದೆ. ಆದ-'ರೆ ಕರ್ನಾಟಕದಲ್ಲಿ 2.5%, ಕೇರಳದಲ್ಲಿ 8% ನಿರುದ್ಯೋಗವಿದೆ. ನಿರುದ್ಯೋಗ ಸಮಸ್ಯೆಯಿಂದಾಗಿ ಯುವಜನಾಂಗ ವಿದೇಶಗಳಿಗೆ ಹೋಗುತ್ತಿದ್ದಾರೆ. ಕೇರಳದಲ್ಲಿ 8.05% ಹಣದುಬ್ಬರವಿದೆ. ಕರ್ನಾಟಕದಲ್ಲಿ 4% ಒಳಗಿದೆ. ಹೀಗಿರುವಾಗ ಎನ್ ಡಿ. ಎಫ್ ಪಕ್ಷಕ್ಕೆ ಮತ ಹಾಕಬೇಕೆ? ಕೇರಳ ಸಾಲಗಾರ ರಾಜ್ಯವಾಗಿದೆ. ಆರ್ಥಿಕ ಹೊಣೆಗಾರಿಕೆ ಕಾಯ್ದೆಯಡಿ ವಿತೀಯ ಕೊರತೆ 3.5% ರಷ್ಟಿದೆ. ಸಾಲವು ಒಟ್ಟು ಜಿಡಿಪಿಯ 25% ಒಳಗಿರಬೇಕು, ಆದರೆ 35% ಇದ್ದು, ಕೇರಳ ರಾಜ್ಯ ಆರ್ಥಿಕ ದಿವಾಳಿಯತ್ತ ಹೋಗಿದೆ ಎಂದರು.

# ವೀರಯೋಧ ಮಲ್ಲಯ್ಯನಾಯಕ ಪೆದರಡ್ಡಿಯವರನ್ನು ಭವ್ಯವಾಗಿ ಸ್ವಾಗತಿಸಿದ ಶಾಸಕ ಹಂಪಯ್ಯನಾಯಕ

## 22 ವರ್ಷ ಗಡಿಯಲ್ಲಿ ದೇಶ ಕಾದ ಯೋಧನಿಗೆ ಅದ್ದೂರಿ ಸ್ವಾಗತ ಶುಭಕೋರಿದ ಸಂಸದ ಕುಮಾರ್ ನಾಯಕ್,










**ನೈಜ್ಯ ದೇಸೆ ನ್ಯೂಸ್**

ಮಾನ್ವಿ: ತಾಲೂಕಿನ ದೇವಿಪುರ ಗ್ರಾಮದ ಶ್ರೀ ದ್ಯಾವಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಭಾರತೀಯ ಸೇನೆಯ ಗಡಿ ಭದ್ರತಾಪಡೆಯಲ್ಲಿ 22 ವರ್ಷಗಳ ಸುಧೀರ್ಘವಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಸ್ವ ಗ್ರಾಮಕ್ಕೆ ಆಗಮಿಸಿದ ವೀರ ಯೋಧ ಮಲ್ಲಯ್ಯನಾಯಕ ಪೆದರಡ್ಡಿ ರವರನ್ನು ಗ್ರಾಮಸ್ಥರು ಹಾಗೂ ಶಾಸಕ ಹಂಪಯ್ಯನಾಯಕ, ಸಂಸದ ಜಿ.ಕುಮಾರನಾಯಕ ಅತ್ಮಿಯವಾಗಿ ಬರಮಾಡಿಕೊಂಡು ಸ್ವಾಗತಿಸಿದರು. ವೇದಿಕೆಯಲ್ಲಿ ನಿವೃತ್ತ ವೀರ ಯೋಧ ಮಲ್ಲಯ್ಯನಾಯಕ ಪೆದರಡ್ಡಿ ರವರನ್ನು ಸನ್ಮಾನಿಸಿ ಗೌರವಿಸಿ ಶಾಸಕ ಹಂಪಯ್ಯನಾಯಕ ಮಾತನಾಡಿ ದೇಶದ ಭದ್ರತೆ ಹಾಗೂ ದೇಶದಲ್ಲಿನ ನಾಗ-ರಿಕರ ಸುರಕ್ಷತೆಗಾಗಿ ಶ್ರಮಿಸುವ ಯೋಧ-ರಿಗೆ ಹಾಗೂ ಅನ್ನವನ್ನು ನೀಡುವ ರೈತ-ರಿಗೆ, ಸಮಾಜವನ್ನು ರೂಪಿಸುವ ಶಿಕ್ಷಕರಿಗೆ ನಾವೆಲ್ಲ ಗೌರವಸಲ್ಲಿಸಬೇಕಾಗಿರುವುದು ನಮ್ಮ ಅದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು. ಸಂಸದ ಜಿ.ಕುಮಾರನಾಯಕ ಮಾತನಾಡಿ ನಿವೃತ್ತ ಯೋಧರಿಗೆ ಸರ್ಕಾರದಿಂದ ದೊರೆಯುವ ನಿವೃತ್ತ ವೇತನ ,ಕೃಷಿ ಭೂಮಿ ಸೇರಿದಂತೆ ವಿವಿಧ ಸೌಲಭ್ಯಗಳ ಬಗ್ಗೆ ಸದನದಲ್ಲಿ ಮಾತನಾಡಿ ನಿವೃತ್ತ ಯೋಧರಿಗೆ ಸಕಾಲದಲ್ಲಿ ಯೋಜನೆಗಳ ಲಾಭ ದೊರೆಯುವಂತೆ ಒತ್ತಾಯಿಸುತ್ತೇನೆ ದೇಶದ ಭದ್ರತೆಗಾಗಿ ತಮ್ಮ ಜೀವನವನ್ನು ಮುಡುಪಿಡುವ ಯೋಧರು ನಿವೃತ್ತರಾಗಿ ತಮ್ಮ ಗ್ರಾಮಗಳಿಗೆ ಬಂದಾಗ ಅವರನ್ನು ತಾಲೂಕು ಆಡಳಿತದಿಂದ ಗೌರವಿಸುವ ಮೂಲಕ ಯುವಕರಲ್ಲಿ ದೇಶಪ್ರೇಮವನ್ನು ಮೂಡಿಸುವ ಕಾರ್ಯವಾಗಬೇಕಾಗಿದೆ ಈ ವಿಷಯದ ಬಗ್ಗೆ ಕೂಡ ಸರಕಾರದ ಗಮನ ಸೆಳೆಯುತ್ತೇನೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಉಟಕನೂರು ಅಡವಿಸಿದ್ದೇಶ್ವರ ಸಂಸ್ಥಾನಮಠದ ಶ್ರೀ ಮರಿಬಸವಲಿಂಗ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು, ಸಿಂಧನೂರು ವೆಂಕಟಗಿರಿ ಕ್ಯಾಂಪಿನ ಶ್ರೀ ಸದಾನಂದಶರಣರು ಆರ್ಶೀವಾಚನ ನೀಡಿದರು. ಈ ಕಾರ್ಯಕ್ರಮದಲ್ಲಿ ಮುಖಂಡರಾದ ಬಿ,ಮಾನಪ್ಪ ನಾಯಕ,ರಾಜಾ ಶ್ಯಾಮಸುಂದರ್ ನಾಯಕ ವಕೀಲರು, ರಾಗಲಪರ್ವಿ ತಿಮ್ಮಯ್ಯನಾಯಕ, ಡಾ.ಬಸವರಾಜಪ್ಪ ಪೋತ್ನಾಳ,ಹನುಮಂತಪ್ಪ ವಕೀಲರು ದೇವಿಪುರ, ಬಿ.ಸಿ.ಎಂ.ಅಧಿಕಾರಿ ಬಾಗಯ್ಯ ನಾಯಕ, ಮಾಜಿ ಗ್ರಾಪಂ ಅಧ್ಯಕ್ಷರಾದ ಬಾಲಯ್ಯ ನಾಯಕ, ಅಂಬಣ್ಣ ನಾಯಕ, ಆಂಜನೇಯ ನಸ್ಲಾಪುರ, ರಾಯಚೂರು ಜಿಲ್ಲಾ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣಮೂರ್ತಿ ಕಲ್ಲೂರು, ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘ ಮಾನ್ವಿ ಅಧ್ಯಕ್ಷರಾದ ಬಸವರಾಜ ನಾಯಕ ಮುಷ್ಟೂರು. ನಿವೃತ್ತ ಯೋಧ ಆಂಜನೇಯ ನಾಯಕ ನೀರಮಾನ್ವಿ, ಸೇರಿದಂತೆ ತಾಲೂಕಿನ ನಿವೃತ್ತ ಮಾಜಿ ಯೋಧರು, ಹಾಗೂ ಯೋಧನ ಕುಟುಂಬಸ್ಥರು ಮತ್ತು ಗ್ರಾಮಸ್ಥಾರು,ಭಾಗವಹಿಸಿದರು. ಸುಮಾರು 22 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ್ದ ಸಂತೋಷ ಜಮ್ಮು-ಕಾಶ್ಮೀರ, ದೆಹಲಿ, ಪಂಜಾಬ್ ಸೇರಿದಂತೆ ಹಲವೆಡೆ ಕರ್ತವ್ಯ ನಿರ್ವಹಿಸಿದ್ದಾರೆ. ಹೀಗಾಗಿ, ಊರಿಗೆ ಮರಳಿ ಬಂದ ವೀರ ಯೋಧನನ್ನು ಗ್ರಾಮಸ್ಥರು ತಾಲೂಕಿನ ನೀರಮಾನ್ವಿ ಗ್ರಾಮದ ಶ್ರೀ ರೇಣುಕ ಯಲ್ಲಮ್ಮ ದೇವಸ್ಥಾನದ ಹತ್ತಿರ ವೀರ ಯೋಧ ಮಲ್ಲಯ್ಯನಾಯಕ ಪೆದರಡ್ಡಿ ರವರನ್ನು ತಾಲೂಕಿಗೆ ಸ್ವಾಗತಿಸಲಾಯಿತು. ನೀರಮಾನ್ವಿ ಗ್ರಾಮದಿಂದ ಮಾನ್ವಿ ಪಟ್ಟಣ ಹಾಗೂ ಹಿರೇಕೊಟ್ನೆಕಲ್, ಪೋತ್ನಾಳ ಗ್ರಾಮದ ಮಾರ್ಗವಾಗಿ ತೆರೆದ ಜೀಪಿನಲ್ಲಿ ನೂರಾರು ದೇಶ ಅಭಿಮಾನಿಗಳು ಬೈಕ್ ಮೆರವಣಿಗೆ ಮೂಲಕ ದೇವಿಪುರ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಮಹಿಳೆಯರು ಆರತಿ ಬೆಳಗಿ ತಮ್ಮೂ-ರಿನ ವೀರ ಯೋಧನಿಗೆ ಬರಮಾಡಿಕೊಂಡರು.

## ಸಾಹಿತ್ಯ ಸಿಂಚನ

ಹಣದಿಂದಲ್ಲ ಮಾನವನ ಮೌಲ್ಯ,
ಗುಣದಿಂದಲೇ ಹೆಚ್ಚುವುದು ಗೌರವ.
ನಗುಮುಖದಿಂದ ಮಾತಾಡಿದರೆ,
ಹೃದಯಗಳು ಸೇರುತ್ತವೆ ಸಹಜವಾಗಿ.

ಸತ್ಯದ ಮಾರ್ಗ ಹಿಡಿದ ಹೆಜ್ಜೆ,
ಜೀವನಕ್ಕೆ ನೀಡುತ್ತದೆ ಬೆಳಕಿನ ಬೆಳೆ.
ದಯೆಯ ಮನಸು, ಸೇವೆಯ ಕೈ,
ಅದೇ ಮಾನವನ ನಿಜವಾದ ವೈಭವದ ಮೈ.

ಕ್ಷಮೆ ಕಲಿತ ಮನವು ಮಹಾನ್,
ಪ್ರೀತಿ ಹಂಚಿದವನೇ ಸತ್ಯಮಾನವನು ತಾನೇ.
ಒಳ್ಳೆಯ ಗುಣಗಳೇ ಬದುಕಿನ ಧನ,
ಅವುಗಳಿಂದಲೇ ಬೆಳಗುತ್ತದೆ ಜನಮನ.

ಒಳ್ಳೆಯತನ ಬೀಜ ಬಿತ್ತಿದರೆ,
ಭವಿಷ್ಯವೇ ಹೂವಾಗಿ ಅರಳುತ್ತದೆ.
ಗುಣದಿಂದ ಬದುಕಿದ ಜೀವನ,
ಎಂದೆಂದಿಗೂ ಉಳಿಯುವ ಸ್ಮರಣ.


–ಕಿರಣ್ ರಾಜ್

# ಜೆಸ್ಕಾಂನಿಂದ ಏಪ್ರಿಲ್ 07ರಂದು ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್




ರಾಯಚೂರು ಏಪ್ರಿಲ್ 05 (ಕರ್ನಾಟಕ ವಾರ್ತೆ): ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 2ರ 110 ಕೆ.ವಿ ಮೇಸ್, ಎಪಿಎಮ್‌ಸಿ ಯಾರ್ಡ್ 3 ಡ್ರಾಗ್‌ಹೌಸ್ ಲಿಂಕ್ ಲೈನ್ ಕಾಮಗಾರಿ ನಡೆಯುವ ಪ್ರಯುಕ್ತ ಏಪ್ರಿಲ್ 07ರ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಅಲ್ಲಮಪ್ರಭು ಕಾಲೋನಿ, ಪೋತಗಲ್ ರೋಡ, ಎಲ್.ಬಿ.ಎಸ್. ನಗರ, ಅಲಿ ಕಾಲೋನಿ, ಚಂದ್ರ ಬಂಡ ರಸ್ತೆ, ಸಂತೋಷ ನಗರ, ವಿಶ್ವನಾಥ ಕಾಲೋನಿ, ಪೋತಗಲ್ ಕ್ರಾಸ್, ಆಶ್ರಯ ಕಾಲೋನಿ ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.ಹೆಚ್ಚಿನ ಮಾಹಿತಿಗಾಗಿ ನಿರಂತರ ಗ್ರಾಹಕರ ಸೇವಾ ಕೇಂದ್ರ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಜಾಲಹಳ್ಳಿಯಲ್ಲಿ ಡಾ. ಬಾಬು ಜಗಜೀವನ್ ರಾಮ್ ಅವರ ಜಯಂತಿ ಅದ್ದೂರಿಯಾಗಿ ಆಚರಣೆ

ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ ಎ 5 : ಡಾ. ಬಾಬು ಜಗಜೀವನ್ ರಾಮ್ ಅವರ 119ನೇ ಜಯಂತಿಯನ್ನು ಜಾಲಹಳ್ಳಿ ಪಟ್ಟಣದ ಎರಡನೇ ವಾರ್ಡಿನ ಡಾ.ಬಾಬು ಜಗಜೀವನ್ ರಾಮ್ ವೃತ್ತದಲ್ಲಿ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಪ್ರಾರಂಭದಲ್ಲಿ ಮುಖಂಡರಾದ ಭೂತಪ್ಪ ದೇವರಮನೆ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರು, ಭಾರತದ ಮಾಜಿ ಉಪಪ್ರಧಾನಿಗಳು ಹಾಗೂ ಶೋಷಿತರ ಮತ್ತು ದಮನಿತರ ಹಕ್ಕುಗಳಿಗಾಗಿ ಜೀವನಪೂರ್ತಿ ಹೋರಾಡಿದ ಮಹಾನ್ ನಾಯಕ ಡಾ. ಬಾಬು ಜಗಜೀವನ್ ರಾಮ್ ಅವರ ಸೇವೆಯನ್ನು ಸ್ಮರಿಸಿದರು ಹಾಗೂ ಎಲ್ಲರನ್ನು ಸ್ವಾಗತಿಸಿದರು.ನಂತರ ಊರಿನ ಗಣ್ಯರು ಹಾಗೂ ಮುಖಂಡರಿಂದ ಡಾ. ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಎಲ್ಲರೂ ಮಾಲಾರ್ಪಣೆ ಮಾಡಿದರು.ಮುಖ್ಯ ಭಾಷಣ ಮಾಡಿದ ಸಾಬಣ್ಣ ಕಮ್ಮಲದಿನ್ನಿ ಅವರು, ಡಾ. ಬಾಬು ಜಗಜೀವನ್ ರಾಮ್ ಅವರು ಸಮಾಜದ ಹಿಂದುಳಿದ ಮತ್ತು ಪೀಡಿತ ವರ್ಗಗಳ ಹಕ್ಕುಗಳಿಗಾಗಿ ನಡೆಸಿದ ಹೋರಾಟ ಅಪಾರವಾಗಿದೆ ಎಂದು ಹೇಳಿದರು. ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಸ್ಥಾಪನೆಗೆ ಅವರು ನೀಡಿದ ಕೊಡುಗೆ ಅಪ್ರತಿಮವಾಗಿದ್ದು, ಅವರ



ಚಿಂತನೆಗಳು ಇಂದಿಗೂ ನಮ್ಮನ್ನು ಪ್ರೇರೇಪಿಸುತ್ತಿವೆ ಎಂದು ಅಭಿಪ್ರಾಯಪಟ್ಟರು.ಈ ಸಂದರ್ಭದಲ್ಲಿ ಅವರ ಆದರ್ಶಗಳನ್ನು ಅನುಸರಿಸಿ ಸಮಾನತೆ ಮತ್ತು ನ್ಯಾಯಯುತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸುವ ಸಂಕಲ್ಪವನ್ನು ತೆಗೆದುಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಹಾಜರಿದ್ದವರು:ಸಾಬಣ್ಣ ಕಮಲದಿನ್ನಿ, ಭೂತಪ್ಪ ದೇವರಮನೆ, ವೈಶಾಲಿ ಜಳಕಿ (ಪಿಎಸ್ಐ, ಜಾಲಹಳ್ಳಿ), ಡಾ. ಆರ್.ಎಸ್. ಹುಲಿಮನಿ (ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಕೇಂದ್ರ), ಜಗದೀಶ್ ಪಂಪಾಪತಿ, ಬಾಬಾ ಮೆಡಿಕಲ್, ಮೌನೇಶ್ (ಪತ್ರಕರ್ತರು), ಗಿರಿಯಪ್ಪ (ಪತ್ರಕರ್ತರು), ಹುಸೇನ್ ಸಾಬ್ ನಾಸಿ, ರಂಗಪ್ಪ ತೊಗರಿ, ರಾಮಪ್ಪ ತವಗ,



ರಮೇಶ್ ಬಾಗೂರು, ಭೀಮಣ್ಣ ವಿರಗೂಟ್, ರಂಗಪ್ಪ ಬಂಡಿ, ಯೇಸು ಕಮಲದಿನ್ನಿ, ಮದುರಂಗಪ್ಪ ಮ್ಯಾಗೇರಿ, ಅಯ್ಯಪ್ಪ ತವಗ, ಗೋವಿಂದಪ್ಪ ಮಾಸ್ಟರ್, ನಾಗರಾಜ್ ಪೂಜಾರ್, ರಮೇಶ್ ಮಾಸ್ಟರ್, ಭೀಮಪ್ಪ ಅಂಜಳ, ರಮೇಶ್ ಟೈಲರ್, ರಂಗನಾಥ ಟೇಲರ್, ಬಸವರಾಜ್ ಬಾವಿಮನಿ, ಆದೇಶ್ ತೊಗರಿ, ಕಾಶಿನಾಥ್ ಹೊಸಮನಿ, ಮಲ್ಲಪ್ಪ ಊಟಿ, ರಮೇಶ್ ಊಟಿ, ಶಿವಪುತ್ರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಹಾಗೂ ಡಾ. ಬಾಬು ಜಗಜೀವನ್ ರಾಮ್ ಗ್ರಾಮ ಘಟಕದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಗೌರವಾಧ್ಯಕ್ಷರು, ಸರ್ವ ಸದಸ್ಯರು ಮತ್ತು ಊರಿನ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾ–ರಿಗಳು ಭಾಗವಹಿಸಿದ್ದರು.ಇದಲ್ಲದೆ ಆರ್.ಎಸ್.ಎಸ್.ನ ನೂತನ ನಿರ್ದೇಶಕರಾದ ವೆಂಕೋಬ ಪೂಜಾರಿ ಹಾಗೂ ಖುರ್ಷಿದ್ ಪಟೇಲ್ ಕೂಡ ಉಪಸ್ಥಿತರಿದ್ದರು.

# ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಸ್ಥಾಪನೆಗಾಗಿ ನಿರಂತರವಾಗಿ ಹೋರಾಡಿದ ನಾಯಕ ಬಾಬು ಜಗಜೀವನ್ ರಾವ್ – ಹಂಪಯ್ಯ ನಾಯಕ್



ನೈಜ್ಯ ದೆಸೆ ನ್ಯೂಸ್

ಮಾನ್ವಿ : ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದಲ್ಲಿ ಹಸಿರು ಕ್ರಾಂತಿ ಹ–ರಿಕಾರರು ಹಾಗೂ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಾದ ಬಾಬು ಜಗಜೀವನ್ ರಾಮ್ ಅವರ ಜಯಂತಿಯನ್ನು ತಾಲೂಕ್ ಆಡಳಿತ, ತಾಲೂಕು ಪಂಚಾಯಿತಿ ಮಾನ್ವಿ ಮತ್ತು ಸಮಾಜ ಕಲ್ಯಾಣ ಇಲಾಖೆ ಮಾನ್ವಿ ಇವರ ಸಂಂ–ಯುಕ್ತ ಆಶ್ರಯದಲ್ಲಿ ಅತ್ಯಂತ ಗೌರವಭಾವದಿಂದ ಆಚರಿಸಲಾಯಿತು.ಕಾರ್ಯಕ್ರಮದ ಅಂಗವಾಗಿ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಜಿ. ಹಂಪಯ್ಯ ನಾಯಕ್ ಅವರು ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಿ ಪುಷ್ಪಾರ್ಚನೆ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಬಾಬೂಜಿ ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಸ್ಥಾಪನೆಗಾಗಿ ನಿರಂತರವಾಗಿ ಹೋರಾಡಿದ ದೀರ್ಘದರ್ಶಿ ನಾಯಕರು ಎಂದು ತಿಳಿಸಿದರು. ದಲಿತರು, ಹಿಂದುಳಿದವರು ಹಾಗೂ ಬಡವರ ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಸಬಲೀಕರಣಕ್ಕಾಗಿ ಅವರು ಮಾಡಿದ ಸೇವೆಗಳು ದೇಶದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿವೆ ಎಂದರು ಸ್ವಾತಂತ್ರ್ಯ ಹೋರಾಟದ ದಿನಗಳಿಂದಲೇ ಸಾರ್ವಜನಿಕ ಸೇವೆಗೆ ತೊಡಗಿಸಿಕೊಂಡ ಬಾಬು ಜಗಜೀವನ್ ರಾಮ್ ಅವರು ಕೇಂದ್ರ ಸರ್ಕಾರದಲ್ಲಿ ವಿವಿಧ ಮಹತ್ವದ ಹುದ್ದೆಗಳನ್ನು ಅಲಂಕರಿಸಿ ರೈತರ ಅಭಿವೃದ್ಧಿ, ಆಹಾರ ಭದ್ರತೆ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಬಲ ನೀಡಿದ ಮಹಾನ್ statesman ಆಗಿದ್ದರು ಎಂದು ಶಾಸಕರು ಹೇಳಿದರು. ಅವರ ಆದರ್ಶಗಳು ಇಂದಿನ ಯುವಪೀಳಿಗೆಗೆ ದಾರಿದೀಪವಾಗಿದ್ದು, ಸಮಾನ ಅವಕಾಶಗಳ ಸಮಾಜ ನಿರ್ಮಾಣವೇ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಅಭಿಪ್ರಾಯಪಟ್ಟರು.ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಹಾಗೂ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಬಿ.ಕೆ. ಅಂಬರೇಶಪ್ಪ ವಕೀಲರು, ಹಿರಿಯ ನಾಯವಾದಿಗಳಾದ ಗೊಮ್ಮ ಬಸವರಾಜ್, ಶಾಸಕರ ಸುಪುತ್ರರಾದ ಶಿವರಾಜ್ ನಾಯಕರು, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷರಾದ ಚನ್ನಬಸಪ್ಪ ಗೌಡ ಬೆಟ್ಟದೂರು, ಯಲ್ಲಪ್ಪ ಬಾದರದಿನ್ನಿ ವಕೀಲರು, ಬಸವರಾಜ್ ನಕ್ಕುಂದಿ, ಸತ್ತಾರ್ ಬಂಗ್ಲೆವಲೇ, ಪರಶುರಾಮ್ ಬಾಗಲ್ವಾಡ, ಶಂಕರ್ ಜಗ್ಲಿ ಸೇರಿದಂತೆ ಅನೇಕ ಜನಪ್ರತಿನಿಧಿಗಳು, ಸಮುದಾಯದ ಮುಖಂಡರು, ವಿವಿಧ ಸಂಘಟನೆಗಳ ಕಾರ್ಯಕರ್ತರು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತ–ರಿದ್ದರು.ಜಯಂತಿ ಅಂಗವಾಗಿ ಮೆರವಣಿಗೆ, ಪುಷ್ಪನಮನ ಕಾರ್ಯಕ್ರಮ ಹಾಗೂ ಬಾಬು ಜಗಜೀವನ್ ರಾಮ್ ಅವರ ಜೀವನ ಸಾಧನೆಗಳನ್ನು ಪರಿಚಯಿಸುವ ವಿಶೇಷ ಕಾರ್ಯಕ್ರಮಗಳು ನಡೆಯಿತು. ಸಮಾಜದಲ್ಲಿ ಸಮಾನತೆ ಮತ್ತು ಸೌಹಾರ್ದತೆಯನ್ನು ಬೆಳೆಸುವ ಸಂಕಲ್ಪದೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

# ನಗನೂರ ದುರಂತ: ಮೃತರ ಕುಟುಂಬಕ್ಕೆ ಸಂಸದ ಜಿ. ಕುಮಾರ ನಾಯಕ ಸಾಂತ್ವನ

ನೈಜ್ಯ ದೆಸೆ ನ್ಯೂಸ್

ಸುರಪುರ ತಾಲೂಕಿನ ನಗನೂರ ಗ್ರಾಮದಲ್ಲಿ ನಡೆದ ದುರ್ಘಟನೆ ಮನಸ್ಸನ್ನು ತುಂಬಾ ಕಲುಕಿದೆ. ಒಂದೇ ಕುಟುಂಬಕ್ಕೆ ಸೇರಿದ ನಾಲ್ವರು ನೀರುಪಾಲಾದ ಘಟನೆ ಅತ್ಯಂತ ದುಃಖಕರವಾಗಿದ್ದು, ಈ ಸುದ್ದಿ ಕೇಳಿದ ಕ್ಷಣದಿಂದಲೇ ಹೃದಯ ಭಾರವಾಗಿದೆ. ದುರ್ಘಟನೆಯಲ್ಲಿ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ತಿಳಿಸಿದೆ. ಅವರ ಮನೆಯ ಮೌನವೇ ನೋವಿನ ಆಳವನ್ನು ವ್ಯಕ್ತಪಡಿಸುತ್ತಿತ್ತು. ಮಕ್ಕಳನ್ನು ಕಳೆದುಕೊಂಡ ತಂದೆ–ತಾಯಿಯ



ಹೃದಯವಿದ್ರಾವಕ ಸ್ಥಿತಿ ಮನಸ್ಸನ್ನು ಸ್ಪರ್ಶಿಸಿತು.ಈ ದುರ್ಘಟನೆ ಕುರಿತು ತೀವ್ರ ಸಂತಾಪ ವ್ಯಕ್ತಪಡಿಸಿ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ತಕ್ಷಣವೇ ಮಾತುಕತೆ ನಡೆಸಿ, ಸರ್ಕಾರದಿಂದ ಅಗತ್ಯ ಪರಿಹಾರ, ಆರ್ಥಿಕ ನೆರವು ಹಾಗೂ ಕುಟುಂಬಕ್ಕೆ ಬೇಕಾದ ಎಲ್ಲಾ ರೀತಿಯ ಸಹಾಯವನ್ನು ಶೀಘ್ರವಾಗಿ ಒದಗಿಸಲು ಸೂಚಿಸಲಾಗಿದೆ. ಇಂತಹ ದುರ್ಘಟನೆಗಳು ಮರುಕಳಿಸದಂತೆ ಸ್ಥಳೀಯ ಆಡಳಿತ ಅಗತ್ಯ ಮುನ್ನೆಚ್ಚ–ರಿಕಾ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಲಾಗಿದೆ.ಮೃತರ ಆತ್ಮಗಳಿಗೆ ಶಾಂತಿ ದೊರಕಲಿ. ಕುಟುಂಬದ ಸದಸ್ಯರಿಗೆ ಈ ಅಸಹನೀಯ ದುಃಖವನ್ನು ಎದುರಿಸುವ ಶಕ್ತಿ ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

# ಬಾಬು ಜಗಜೀವನ ರಾಮ್ ಬದುಕು ದಾರಿದೀಪ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಸಮಾಜದಲ್ಲಿ ದೌರ್ಜನ್ಯ,ಶೋಷಣೆ ಹಾಗೂ ತುಳಿತಕ್ಕೆ ಒಳಗಾದ ಜನಾಂಗಕ್ಕೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಡಾ.ಬಾಬು ಜಗಜೀವನ ರಾಮ್ ಅವರ ಬದುಕಿನ ಆದರ್ಶಗಳು ನಮಗೆಲ್ಲರಿಗೂ ಮಾದರಿ ಆಗಬೇಕಾಗಿದೆ ಎಂದು ಶಿಕ್ಷಕಿ ಸಾಹಿತಿ ಮಡಿವಾಳಮ್ಮ ಎಸ್ ಜಿ ನಾಡಗೌಡ ಹೇಳಿದರು. ಪಟ್ಟಣದ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆ ಆವರಣದಲ್ಲಿ ತಾಲೂಕು ಆಡಳಿತ, ತಾಲೂಕಾ ಪಂಚಾಯತ,ಸಮಾಜ ಕಲ್ಯಾಣ ಇಲಾಖೆ ಮುದ್ದೇಬಿಹಾಳ ಹಾಗೂ ಪುರಸಭೆ ತಾಳಿಕೋಟಿ ಇವರ ಸಂಯುಕ್ತ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಡಾ.ಜಗಜೀವನ ರಾಮ್ ಅವರು 30 ವರ್ಷಗಳ ಕಾಲ ಉತ್ತಮ ಸಂಸದ ಸದಸ್ಯರಾಗಿ ದೇಶದ ಹಿತಕ್ಕಾಗಿ ಕೆಲಸ ಮಾಡಿದರು ದೇಶದ ಅತ್ಯುನ್ನತ ಉಪ ಪ್ರಧಾನಿ ಸ್ಥಾನದವರೆಗೆ ಏರಿದರು ಈ ಸ್ಥಾನ ಅವರಿಗೆ ಸಿಕ್ಕಿದ್ದು ಅವರಲ್ಲಿದ್ದ



ಅಪಾರ ಪಾಂಡಿತ್ಯ ಹಾಗೂ ಪ್ರತಿಭೆಯಿಂದಾಗಿ ಇಂತಹ ಮಹನೀಯರ ತತ್ವಾದರ್ಶ ಹಾಗೂ ವಿಚಾರಗಳು ಸರ್ವಕಾಲಿಕವಾಗಿವೆ ಅವುಗಳ ಪ್ರಾಮಾಣಿಕ ಅನುಸರಣೆ ಮಾಡುವುದು ಇಂದಿನ ಅಗತ್ಯವಾಗಿದೆ ಎಂದರು. ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಮಾತನಾಡಿ ಭಾರತದ ಇತಿಹಾಸದಲ್ಲಿ ಇಬ್ಬರು ಮಹಾನ್ ನಾಯಕರಾದ ಡಾ. ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಅವರು ಸದಾ ಸ್ಮರಣೀಯರಾಗಿದ್ದಾರೆ ಅವರ ಇಡೀ ಬದುಕು ಹೋರಾಟದಿಂದ ಕೂಡಿದೆ ಅದನ್ನು ತಿಳಿದುಕೊಳ್ಳುವ ಅಗತ್ಯವಿದೆ ಕೇವಲ ಜಯಂತಿ ಆಚರಿಸಿದರೆ ಸಾಲದು ಅವರ ಬದುಕಿನ ಆದರ್ಶಗಳನ್ನು ಮೈಗುಡಿಸಿಕೊಳ್ಳುವ ಅಗತ್ಯವಿದೆ ಎಂದರು. ಸಮಾಜದ ಮುಖಂಡರಾದ ಡಿ.ಬಿ.ಹಾದಿಮನಿ, ಗೋಪಾಲ ಕಟ್ಟಿಮನಿ ಹಾಗೂ ರಾಮಣ್ಣ ಕಟ್ಟಿಮನಿ ಮಾತನಾಡಿದರು. ತಹಸಿಲ್ದಾರ್ ಗ್ರೇಡ್–2 ಪ್ರದೀಪ ದೇವಗಿರಿಕರ್ ಅಧ್ಯಕ್ಷತೆ



ವಹಿಸಿದ್ದರು. ಇದೇ ಸಂದರ್ಭದಲ್ಲಿ ಕಳೆದ ವರ್ಷ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಸಮಾಜದ ಪ್ರತಿಭಾವಂತ ಮಕ್ಕಳಿಗೆ ಹಾಗೂ ಚೊಕಾವಿ ಗ್ರಾಮದ ಪ್ರಗತಿಪರ ರೈತ ಹಣಮಂತ್ರಾಯ ನಾಟಿಕರ್ ಇವರನ್ನು ತಾಲೂಕಾಡಳಿತದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ತಾಪಂ ಇಓ ಅನಸೂಯಾ ಚಲವಾದಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ,ಡಾ.ಶ್ರೀಶೈಲ ಹುಕ್ಕೇರಿ, ಸಮಾಜ ಕಲ್ಯಾಣ ಇಲಾಖೆಯ ಶಿವಲಿಂಗಪ್ಪ ಹಚಡದ,ಪಿಎಸೈಐ ಜ್ಯೋತಿ ಖೋತ, ಮಹೇಶ ಜೋಶಿ, ರಾಜು ವಿಜಾಪುರ, ಯಮನಪ್ಪ ಕಟ್ಟಿಮನಿ, ಬಸ್ಸು ಮಾದರ,ಸಂಜೀವಪ್ಪ ಬರದೇನಾಳ, ಆಸೀಫ ಕೆಂಭಾವಿ, ಮಹಮ್ಮದ್ ಶಫೀಕ್ ಇನಾಮದಾರ, ರಾಹುಲ್ ರಜಪೂತ, ಮಾದೇವ ಚಟ್ನಳ್ಳಿ (ಅಸ್ಕಿ),ದೇವಪ್ಪ ಮಾದರ(ತುಂಬಗಿ), ಶೇಕಪ್ಪ ಹೋಳಗಿ (ಚಬನೂರ), ಕಾಳಪ್ಪ ಮಾದರ(ಮಿಣ–ಜಗಿ), ಶಿವಪ್ಪ ಕಟ್ಟಿಮನಿ(ಕಾರಗನೂರ), ಪರಶುರಾಮ ಮಾದರ, ಬಾಗಪ್ಪ ಮಸ್ಕನಾಳ, ದ್ಯಾಮಣ್ಣ ಸೋಮನಾಳ(ಕೊಣ್ಣೂರ), ಯಮನಪ್ಪ ಕೆಸರಟ್ಟಿ (ಬಿ.ಸಾಲವಾಡಗಿ), ಮಹಾಂತೇಶ ತಾಳಿಕೋಟಿ,–ಎಸ್.ಎನ್. ಮಲ್ಲಾಡೆ,ಎನ್.ವಿ.ಕೋರಿ,ಎಸ್.ಎಂ. ಕಲಬುರ್ಗಿ, ಮುನ್ನಾ ಅತ್ತಾರ, ತಾಲೂಕ ಮಟ್ಟದ ಅಧಿಕಾರಿಗಳು, ವಿವಿಧ ಗ್ರಾಮಗಳಿಂದ ಆಗಮಿಸಿದ ಸಮಾಜದ ಪ್ರಮುಖರು ಮತ್ತಿತರರು ಇದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಡಾ.ಬಾಬು ಜಗಜೀವನರಾಂ ಅವರ ಭಾವಚಿತ್ರದ ಭವ್ಯ ಮೆರವಣಿಗೆ ಸಕಲ ವಾದ್ಯ ಮೇಳಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ನಡೆಯಿತು.

## ನೇಮಕಾತಿ ಪ್ರಕಟಣೆ

NHM ಕರ್ನಾಟಕ ನೇಮಕಾತಿ 2026: 35 ಕಾರ್ಯಕ್ರಮ ಸಹಾಯಕ, ಸಲಹೆಗಾರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ಆರೋಗ್ಯ ಮಿಷನ್ ಕರ್ನಾಟಕವು NHM ಕರ್ನಾಟಕ ಅಧಿಕೃತ ಅಧಿಸೂಚನೆ ಏಪ್ರಿಲ್ 2026 ರ ಮೂಲಕ ಕಾರ್ಯಕ್ರಮ ಸಹಾಯಕ, ಸಲಹೆಗಾರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13–ಏಪ್ರಿಲ್–2026 ರಂದು ವಾಕ್–ಇನ್–ಇಂಟರ್ವ್ಯೂಗೆ ಹಾಜರಾಗಬಹುದು ಅಧಿಕೃತ ವೆಬ್‌ಸೈಟ್: hfwcom.karnataka.gov.in

## ರೈತರು ಮತ್ತು ದಲಿತರ ಬದುಕು ಹಸನಾಗಿಸಿದ ಬಾಬು ಜಗಜೀವನರಾಂ ಅವರ ಹಾದಿ ಎಲ್ಲರಿಗೂ ಮಾದರಿ

ನೈಜ್ಯ ದೆಸೆ ನ್ಯೂಸ್



ದೇಶದ ಬೆನ್ನೆಲುಬಾದ ರೈತರು ಹಾಗೂ ಶೋಷಿತ ವರ್ಗದವರಾದ ದಲಿತರ ಬದುಕಿನಲ್ಲಿ ಬೆಳಕು ತರಲು ಬಾಬು ಜಗಜೀವನರಾಂ ಅವರು ಪಟ್ಟ ಶ್ರಮ ಅಮೋಘವಾದುದು. ಅವರ ಜೀವನ ಮತ್ತು ಹೋರಾಟದ ಹಾದಿ ಇಂದಿನ ಯುವ ಪೀಳಿಗೆಗೆ ಅತ್ಯಂತ ದೊಡ್ಡ ಮಾದರಿ," ಎಂದು ಕೊಪ್ಪಳ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಎಸ್.ವಿ.ಡಾಣಿ ಅವರು ಅಭಿಪ್ರಾಯಪಟ್ಟರು.ತಾಲ್ಲೂಕಿನ ತಳಕಲ್ ಗ್ರಾಮದ ಬಳಿ ಇರುವ ಕೊಪ್ಪಳ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಬಾಬು ಜಗಜೀವನರಾಂ ಅವರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.ಬಾಬು ಜಗಜೀವನರಾಂ ಅವರ ಸಾಧನೆಗಳನ್ನು ವಿದ್ಯಾರ್ಥಿಗಳು ಕೇವಲ ಓದುವುದಕ್ಕೆ ಸೀಮಿತಗೊಳಿಸದೆ, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆ ಮೂಲಕ ದೇಶವನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸದೃಢಗೊಳಿಸುವ ಗುರಿ ಹೊಂದಬೇಕು ಎಂದು ಕುಲಪತಿಗಳು ಕರೆ ನೀಡಿದರು.ಬಾಬೂಜಿಯವರು ಜಾತಿ ತಾರತಮ್ಯದ ವಿರುದ್ಧ ಹೋರಾಡಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನ ಗೌರವ ಸಿಗುವಂತೆ ಮಾಡಿದ ಕ್ರಾಂತಿಕಾರಿ ನಾಯಕ ಎಂದು ಸ್ಮರಿಸಿದರು.ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಕೆ.ರಮೇಶ, ಆಡಳಿತಾಧಿಕಾರಿ ತಿಮ್ಮಾರಡ್ಡಿ ಮೇಟಿ, ವೀರೇಶ ಉತ್ತಂಗಿ, ಅನಂತಕುಮಾರ ದೊರೆ, ಮಂಜುನಾಥ, ರಂಗನಾಥ ಕೋಳೂರು ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

## ಜಿಲ್ಲಾಡಳಿತದಿಂದ ಡಾ.ಬಾಬು ಜಗಜೀವನ ರಾಮ್ 119ನೇ ಜನ್ಮದಿನೋತ್ಸವ

# ಸಮಾನತೆ ಇಲ್ಲದ ಸ್ವಾತಂತ್ರ್ಯ ಅಪೂರ್ಣ: ಜಿಲ್ಲಾಧಿಕಾರಿ ನಿತೀಶ್ ಕೆ.







ನೈಜ್ಯ ದೆಸೆ ನ್ಯೂಸ್

ರಾಯಚೂರು ಏಪ್ರಿಲ್ 05 (ಕರ್ನಾಟಕ ವಾರ್ತೆ): ಸಮಾನತೆ ಇಲ್ಲದ ಸ್ವಾತಂತ್ರ್ಯ ಅಪೂರ್ಣ ಎಂದು ಡಾ. ಬಾಬು ಜಗಜೀವನ ರಾಮ್ ಅವರು ಅಂದೇ ಹೇಳಿದ್ದರು ಹಾಗಾಗಿ ಸಮಾಜದಲ್ಲಿ ಜಾತಿ ಬೇಧ ಮರೆತು ಸಮಾನತೆಗಾಗಿ ಎಲ್ಲರೂ ಶ್ರಮಿಸಬೇಕೆಂದು ಜಿಲ್ಲಾಧಿಕಾರಿ ಕೆ. ನಿತೀಶ್ ಅವರು ಹೇಳಿದರು. ಏಪ್ರಿಲ್ 05ರ ಭಾನುವಾರ ದಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರ ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.ಅವರು ಬಿಹಾರ ರಾಜ್ಯದಲ್ಲಿ ಜನಿಸಿದಾಗ ಅಂದಿನ ಜಾತಿ ವ್ಯವಸ್ಥೆಯ ತಾರತಮ್ಯ ಅವರ ಬಾಲ್ಯದ ದಿನಗಳಲ್ಲಿ ಹಲವಾರು ಕಹಿ ಘಟಕಗಳೆಗಳು ಜರುಗಿದವು. ಅವರು ಎದೆ ಗುಂದದೆ ಹೋರಾಡಿ ಇತಿಹಾಸ ನಿರ್ಮಿಸಿ ಶಿಕ್ಷಣವೇ ಮನಗೆ ಶಕ್ತಿ ಎಂದು ಎಲ್ಲಾ ಶೋಷಿತ ಜನರಿಗೆ ಹೇಳಿದರು. ದೇಶದ ಸ್ವಾತಂತ್ರ್ಯ ಸಮಯದಲ್ಲಿ ಗಾಂಧೀಜಿಯವರ ಪ್ರೇರಣೆಯಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದ್ದರು. ಸಂವಿಧಾನ ರಚನಾ ಸಮಿತಿ ಸದಸ್ಯರಾಗಿ ಶೋಷಿತ ಜನರಿಗೆ ಹಕ್ಕು ನೀಡುವಲ್ಲಿ ಬಹುಮುಖ್ಯ ಪಾತ್ರವಹಿಸಿದ್ದರು. ನನ್ನ ಹೋರಾಟ ಆಂಗ್ಲರ ವಿರುದ್ಧ ಅಲ್ಲ ಅಸಮಾನತೆ ವಿರುದ್ಧ ಎಂದು ಅವರು ಹೇಳಿದರು. ನಮ್ಮ ದೇಶದ ಸಂವಿಧಾನ ರಚನೆಯಾದ ನಂತರ ಕೇಂದ್ರ ಸರಕಾರದಲ್ಲಿ ವಿವಿಧ ಇಲಾಖೆಗಳ ಸಚಿವರಾಗಿದ್ದರು. ಕಾರ್ಮಿಕ ಸಚಿವರಾಗಿ ಕಾರ್ಮಿಕರು ಘನತೆ ಜೀವನ ನಡೆಸಲು ಹಲವಾರು ಕಾನೂನುಗಳನ್ನು ಜಾರಿಗೆ ತಂದರು. ರಕ್ಷಣಾ ಸಚಿವರಾಗಿ ಇಂಡೋ–ಪಾಕಿಸ್ತಾನ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿ ದೇಶದ ಸೈನಿಕರಿಗೆ ಧೈರ್ಯ ತುಂಬಿ ದೇಶಕ್ಕೆ ವಿಜಯ ತಂದರು. ಕೃಷಿ ಸಚಿವರಾಗಿ ದೇಶದಲ್ಲಿ ಹಸಿರು ಕ್ರಾಂತಿಯನ್ನೆ ಮಾಡಿದರು. ನಾವು ಇಂದು ನಿಶ್ಚಿಂತೆಯಿಂದ ಊಟ ಮಾಡುತ್ತಿದ್ದೆವೆ ಎಂದರೆ ಇದಕ್ಕೆ ಅವರೆ ಕಾರಣ ಎಂದು ಹೇಳಿದರು.ಸಂಕಷ್ಟ ನಮಗೆ ಬರುವುದು ಶಕ್ತಿಶಾಲಿಯಾಗಿ ಮಾಡಲು ಬಲಹೀನರಾಗಿ ಮಾಡಲು ಅಲ್ಲ ಎಂದು ತಳ ಸಮುದಾಯದ ಜನರಿಗೆ ಧೈರ್ಯ ತುಂಬುವ ಕೆಲಸ ಮಾಡಿದ್ದರು. ಈ ಸಮಾಜದಲ್ಲಿ ಸಮಾನತೆ ಬರಬೇಕಾದರೆ ಶಿಕ್ಷಣದಿಂದ ಸಾಧ್ಯ ಎಂದು ಅವರು ಪದೇ – ಪದೇ ಹೇಳಿದ್ದರು. ಹಾಗಾಗಿ ತಳ ಸಮುದಾಯದ ಎಲ್ಲಾ ಮಕ್ಕಳು ಶಿಕ್ಷಣ ಪಡೆಯಬೇಕು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣ ಪ್ರಮಾಣ ಕಡಿಮೆ ಇದ್ದು, ಹೆಚ್ಚಿನ ಜನರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಮೂಲಕ ಬಾಬು ಜಗಜೀವನರಾಮ್ ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವರ ಕನಸುಗಳನ್ನು ನಾವೆಲ್ಲರೂ ನನಸು ಮಾಡಬೇಕಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು. ರಾಯಚೂರು ಮಹಾನಗರ ಪಾಲಿಕೆಯ ಸದಸ್ಯ ಕಾರ್ಯದರ್ಶಿ ಹಾಗೂ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ ಅವರು ಮಾತನಾಡಿ, ಡಾ.ಬಾಬು ಜಗಜೀವನರಾಂ ಅವರು ಸಮಾಜದಲ್ಲಿ ಜಾತಿ ಬೇಧ ಮರೆತು ಸಮಾನತೆಗಾಗಿ ಶ್ರಮಿಸಿದ್ದ ಶ್ರೇಷ್ಠ ರಾಜಕೀಯ ಮುತ್ಸದ್ದಿ ಆಗಿ ಕಾರ್ಯನಿರ್ವಾಹಣೆ ಮಾಡಿದ್ದಾರೆ ಎಂದರು.ಸಂಪುಟ ದರ್ಜೆಯ ಸಚಿವರಾಗಿ ದೇಶದ ಅಭಿವೃದ್ಧಿಗಾಗಿ ಶ್ರಮಿಸಿದ ಮಹಾನ್ ನಾಯಕ. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ, ಶಿಕ್ಷಣದಿಂದ ಪ್ರತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ಬದಲಾವಣೆ ಕಾಣಲು ಸಾಧ್ಯವಿದೆ ಎಂದು ಅವರು ನಂಬಿದ್ದವರು ಎಂದು ಹೇಳಿದರು.ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡಿದ್ದಾಗ ಮಾತ್ರ ಒಳ್ಳೆಯ ಉದ್ಯೋಗ ಅಧಿಕಾರ ಪಡೆಯಲು ಸಾಧ್ಯವಿದೆ. ಎಲ್ಲಾ ಸಮಾಜದವರು ಒಗ್ಗೂಡಿ ಇಂತಹ ಮಹಾನ್ ವ್ಯಕ್ತಿಗಳ ಜೀವನ ಕುರಿತು ಅರಿತುಕೊಳ್ಳಬೇಕು. ಅವರ ಸಾಧನೆ ಇಂದಿನ ಜನಾಂಗಕ್ಕೆ ಪ್ರೇರಣೆ ಆಗಬೇಕು' ಎಂದರು.ಜಿಲ್ಲೆಯ ಮಾನ್ವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರಾದ ಡಾ.ಬಸವರಾಜ ಕರಡಿಗುಡ್ಡ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಮಾಜಿ ಉಪ ಪ್ರಧಾನಿ ಬಾಬು ಜಗಜೀವನ ರಾಮ್ ಅವರು ಶೋಷಿತರ ಹಕ್ಕಿಗಾಗಿ ಹೋರಾಡಿದವರು, ಹಸಿರು ಕ್ರಾಂತಿಯ ಹರಿಕಾರ. ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ರು, ಕೃಷಿ, ರಕ್ಷಣಾ ಸಚಿವರಾಗಿ ಸೇವೆ ಸಲ್ಲಿಸಿದ್ರು, ಅವರ ಸೇವೆ ಸ್ಮರಣೀಯವಾದದು. ಅವರ ಜೀವನ ಚರಿತ್ರೆ ಯುವ ಪೀಳಿಗೆಗೆ ತಲುಪಿಸುವ ಕಾರ್ಯ ನಡೆಯಬೇಕು ಎಂದರು.ದೇಶವು ಹಸಿವಿನಿಂದ ಬಳಲುತ್ತಿರುವ ವೇಳೆಯಲ್ಲಿ ದೇಶದ ಪರಿಸ್ಥಿತಿ ಅರಿತುಕೊಂಡು ಒಂದು ರೂಪುರೇಷೆಯನ್ನು ತಯಾರಿಸಿಕೊಂಡರು. ರೈತರು ಆಹಾರ ಧಾನ್ಯದಲ್ಲಿ ಹೆಚ್ಚುವರಿ ಇಳುವರಿ ಪಡೆಯಲು ಆಧುನಿಕ ಕೃಷಿ ಸಲಕರಣೆಗಳನ್ನು ಪರಿಚಯಿಸುವುದರ ಮೂಲಕ ಕೃಷಿಯಲ್ಲಿ ಬಹುದೊಡ್ಡ ಬದಲಾವಣೆ ತಂದರು ಎಂದರು.ಬಾಬೂಜಿ ಅವರ ಮಹತ್ಕಾರ್ಯದಿಂದಾಗಿ ರೈತರು ಹೆಚ್ಚಿನ ಇಳುವರಿ ಮತ್ತು ಆರ್ಥಿಕ ಅಭಿವೃದ್ಧಿ ಕಾಣಲು ಸಾಧ್ಯವಾಯಿತು. ತಮಗೆ ಸಿಕ್ಕಂತಹ ಅಧಿಕಾರವನ್ನು ದೇಶದ ಅಭಿವೃದ್ಧಿ ಮತ್ತು ಸಮಸ್ಯೆಗಳ ನಿವಾರಣೆಗಾಗಿ ಅವಿರತವಾಗಿ ಶ್ರಮಿಸಿದ್ದ ಮಹಾನ್ ನಾಯಕ ಎಂದು ಬಣ್ಣಿಸಿದರು.ಇದೇ ಸಂದರ್ಭದಲ್ಲಿ ರಾಯಚೂರು ತಹಶೀಲ್ದಾರ್ ಸುರೇಶ ವರ್ಮ ಅವರು ಭಾರತ ಸಂವಿಧಾನದ ಪೀಠಿಕೆಯನ್ನು ಎಲ್ಲರಿಗೆ ಭೋದಿಸಿದರು.ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ: ಹತ್ತನೇ ತರಗತಿಯಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಾದ ಶ್ರೇಯಾ ತಂದೆ ಸೋಮಪ್ಪ, ಶ್ರೀದೇವಿ ತಂದೆ ಶಿವರಾಜ, ಸ್ಫೂರ್ತಿ ಬಂಡಿವಡ್ಡರ ತಂದೆ ಶಿವಪ್ಪ ಬಂಡಿವಡ್ಡರ್ ಅವರಿಗೆ ಡಾ.ಬಾಬು ಜಗಜೀವನ ರಾಮ್ ಅವರ ಜಯಂತಿ ಅಂಗವಾಗಿ ವಿವಿಧ ಗಣ್ಯರಿಂದ ಸನ್ಮಾನಿಸಿ ಗೌರವಿಸಿದರು.ವಿವಿಧ ಗಣ್ಯರಿಂದ ಛಾಯಾಚಿತ್ರ ವೀಕ್ಷಣೆ: ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರು ಜಯಂತಿ ಅಂಗವಾಗಿ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಬಾಬು ಜೀ ಜೀವನ, ಹೋರಾಟ, ಸಾಧನೆ ಕುರಿತು ಅವರ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಛಾಯಾಚಿತ್ರಗಳನ್ನು ಜಿಲ್ಲಾಧಿಕಾರಿಗಳು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು. ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ವಿವಿಧ ಗಣ್ಯರು, ಸಾರ್ವಜನಿಕರು ವೀಕ್ಷಣೆ ಮಾಡಿದರು.ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಆದಿಜಾಂಬವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಕಪಕ ರಾಜೇಂದ್ರ ಜಲ್ದಾರ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರವೀಣ್ ಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜದ ಇತರರು ಇದ್ದರು.

## ಉತ್ತಮ ಸೇವಾ ರತ್ನ ಪ್ರಶಸ್ತಿಗೆ ಮಂಜಮ್ಮ.ಕೆ ಆಯ್ಕೆ

ನೈಜ್ಯ ದೆಸೆ ನ್ಯೂಸ್



ಅರಕೇರಾ: ತಾಲೂಕಿನ ಮಲ್ಲೇದೇವರಗುಡ್ಡ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಮಂಜಮ್ಮ.ಕೆ ಅವರು ಉತ್ತಮ ಸೇವಾ ರತ್ನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ದೇವದುರ್ಗ ಪಟ್ಟಣದ ಸಾರ್ವಜನಿಕ ಕ್ಲಬ್ ಮೈದಾನದಲ್ಲಿ ಏಪ್ರಿಲ್ 7ರಂದು ಸಂಜೆ 4.30ಕ್ಕೆ ನಡೆಯಲಿರುವ ತಾಲೂಕಿನ ಮಹಿಳಾ ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಇದೇ ಸಂದರ್ಭದಲ್ಲಿ ಮಹಿಳಾ ಸರ್ಕಾರಿ ನೌಕರರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮ ಕೂಡ ನಡೆಯಲಿದೆ.ಮಂಜಮ್ಮ.ಕೆ ಅವರ ಸಾಧನೆಗೆ ಸಂಘ–ಸಂಸ್ಥೆಗಳ ಮುಖಂಡರು, ಗ್ರಾಮಸ್ಥರು ಹಾಗೂ ಶಿಕ್ಷಣಾಭಿಮಾನಿಗಳು ಅಭಿನಂದನೆ ವ್ಯಕ್ತಪಡಿಸಿದ್ದಾರೆ. ಗಮನಾರ್ಹವಾಗಿ, ಜನವರಿ ತಿಂಗಳಲ್ಲಿ ನಡೆದ ದೇವದುರ್ಗ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲೂ ಮಂಜಮ್ಮ.ಕೆ ಅವರಿಗೆ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿತ್ತು.

## ಡಾ.ಬಾಬು ಜಗಜೀವನ ರಾಮ್ 119ನೇ ಜನ್ಮ ದಿನಾಚರಣೆ:

# ಗಣ್ಯರಿಂದ ಮಾಲಾರ್ಪಣೆ, ಮೆರವಣಿಗೆಗೆ ಚಾಲನೆ

ನೈಜ್ಯ ದೆಸೆ ನ್ಯೂಸ್




ರಾಯಚೂರು ಏಪ್ರಿಲ್ 05 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರ ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆಯ ಅಂಗವಾಗಿ ಏಪ್ರಿಲ್ 5ರ ಭಾನುವಾರ ದಂದು ನಗರದ ರೈಲ್ವೆ ನಿಲ್ದಾಣದ ಹತ್ತಿರವಿರುವ ಡಾ.ಬಾಬು ಜಗಜೀವನ ರಾಮ್ ಅವರ ಪುತ್ಥಳಿಗೆ ವಿವಿಧ ಗಣ್ಯರಿಂದ ಪೂಜೆ ಕಾರ್ಯಕ್ರಮ ನೆರವೇರಿಸಿ, ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಲಾಯಿತು.ಇದೇ ಸಂದರ್ಭದಲ್ಲಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ್ ನಾಯಕ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಹರೀಶ್, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರವೀಣ್ ಕುಮಾರ್, ಮುಖಂಡರಾದ ರವಿ ಭೋಸರಾಜು, ನರಸಿಂಹಲು ಮಾಡಗಿರಿ, ಕೆ.ಶಾಂತಪ್ಪ, ಎಂ.ವಿರೂಪಾಕ್ಷಪ್ಪ, ರಾಜು, ಪವನ್ ಕುಮಾರ್, ರಾಜೇಂದ್ರ ಜಲ್ದಾರ್, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜದ ಇತರರು ಇದ್ದರು.ಇತ್ತೀಚಿಗೆ ಮುಖ್ಯಮಂತ್ರಿ ಪದಕಕ್ಕೆ ಆಯ್ಕೆಯಾದ ರಾಯಚೂರು ಡಿವೈಎಸ್ಪಿ ಶಾಂತವೀರ ಅವರಿಗೆ ಗಣ್ಯರಿಂದ ಇದೇ ಸಂದರ್ಬದಲ್ಲಿ ಸನ್ಮಾನ ಮಾಡಲಾಯಿತು. ನಂತರ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ ಭಾವಚಿತ್ರದ ಮೆರವಣಿಗೆಗೆ ವಿವಿಧ ಗಣ್ಯರಿಂದ ಚಾಲನೆ ನೀಡಲಾಯಿತು. ಮೆರವಣಿಗೆಯು ನಗರದ ರೈಲ್ವೆ ನಿಲ್ದಾಣದಿಂದ ರಂಗಮಂದಿರದವರೆಗೂ ನಡೆಯಿತು.



# ಪುರಾತನ ಬಾವಿಗೆ ಮರುಜೀವ – ಸಂಸ್ಕೃತಿ ಸೇವಾ ಟ್ರಸ್ಟ್ ಸಾಮಾಜಿಕ ಕಾರ್ಯಕ್ಕೆ ಮೆಚ್ಚುಗೆ

ನೈಜ್ಯ ದೆಸೆ ನ್ಯೂಸ್





ರಾಯಚೂರು : ಪುರಾತನ ಬಾವಿಗೆ ಸ್ವಚ್ಛತೆ ಮಾಡಿ ಮರುಜೀವ ನೀಡಿದ ಸಂಸ್ಕೃತಿ ಸೇವಾ ಟ್ರಸ್ಟ್ (ರಿ) ರಾಯಚೂರು ತಂಡದ ಕಾರ್ಯಕ್ಕೆ ಸಾರ್ವಜನಿಕರಿಂದ ಭಾರೀ ಪ್ರಶಂಸೆ ವ್ಯಕ್ತವಾಗಿದೆ. ಜಿಲ್ಲೆಯಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದ ನಿರಂತರವಾಗಿ ಸಾಮಾಜಿಕ ಸೇವೆಗಳಲ್ಲಿ ತೊಡಗಿಸಿಕೊಂಡಿರುವ ಟ್ರಸ್ಟ್, ಪ್ರತಿ ಭಾನುವಾರ "ಖಣಟಿಜಚಿಥಿ ಜಿಂಡಿ ಖಂ–ಛಿಚಿಟ ಘಾಂಡಿಞ" ಅಭಿಯಾನ ಮೂಲಕ ಹಲವು ಸೇವಾ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ ಎಂದು ಸದಸ್ಯರು ತಿಳಿಸಿದ್ದಾರೆ.ಸ್ವಚ್ಛತೆ ಮಾತ್ರವಲ್ಲ, ಸಂಸ್ಕೃತಿ ಉಳಿಸುವ ಕಾರ್ಯ ಈ ಅಭಿಯಾನದಡಿ ಕಳೆದ 13 ವಾರಗಳಿಂದ ಐತಿಹಾಸಿಕ ಗುಡಿ–ಗುಂಡಾರಗಳು, ಬಾವಿಗಳು, ಬಸ್ ತಂಗುದಾಣಗಳು, ಪ್ರಾಣಿ–ಪಕ್ಷಿಗಳಿಗೆ ನೀರಿನ ವ್ಯವಸ್ಥೆ, ಸಾರ್ವಜನಿಕರಿಗೆ ನೀರಿನ ಅರವಟ್ಟೆ, ಅನ್ನದಾಸೋಹ ಸೇರಿದಂತೆ ಹಲವು ಸೇವಾ ಚಟುವಟಿಕೆಗಳನ್ನು ನಡೆಸಲಾಗಿದೆ. 13ನೇ ವಾರದಲ್ಲಿ ಶಿವ ಪಾರ್ವತಿ ದೇವಸ್ಥಾನ ಪಕ್ಕದಲ್ಲಿರುವ ನೂರು ವರ್ಷಗಳ ಇತಿಹಾಸ ಹೊಂದಿದ ಪವಿತ್ರ ಚಿಲುಮೆ ಕಸದ ತೊಟ್ಟಿಯಂತಾಗಿದ್ದುದನ್ನು ಗಮನಿಸಿ, ಅದನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ ಪುನರ್ಜೀವ ನೀಡಿದ್ದಾರೆ.ಯುವಕರಿಗೆ ಕರೆ – ಸಾರ್ವಜನಿಕ ಆಸ್ತಿಯ ಸಂರಕ್ಷಣೆ ನಮ್ಮ ಕರ್ತವ್ಯ ಈ ಕುರಿತು ಟ್ರಸ್ಟ್ ಸದಸ್ಯರು ಮಾತನಾಡಿ, "ನಮ್ಮ ಜಿಲ್ಲೆ ನಮ್ಮ ಹೆಮ್ಮೆ. ಸ್ವಚ್ಛತೆ ಮಾತ್ರವಲ್ಲ, ನಮ್ಮ ಸಂಸ್ಕೃತಿಯನ್ನು ಉಳಿಸುವ ಜವಾಬ್ದಾರಿ ನಮ್ಮೆಲ್ಲರದು. ಇಂತಹ ಕಾರ್ಯಗಳಿಗೆ ಯುವಕರು ಕೈಜೋಡಿಸಬೇಕು. ಯಾವುದೇ ಸ್ಥಳದಲ್ಲಿ ಸ್ವಚ್ಛತಾ ಕಾರ್ಯ ಅಗತ್ಯವಿದ್ದರೆ ನಮ್ಮನ್ನು ಸಂಪರ್ಕಿಸಬಹುದು" ಎಂದು ತಿಳಿಸಿದ್ದಾರೆ. ಸಂಪರ್ಕ ಸಂಖ್ಯೆ: 7899959811, 8247885291.ಸಮೂಹ ಸಹಕಾರದಿಂದ ಯಶಸ್ವಿ ಕಾರ್ಯ ಈ ಸ್ವಚ್ಛತಾ ಕಾರ್ಯದಲ್ಲಿ ಶಿವ ಪಾರ್ವತಿ ದೇವಸ್ಥಾನದ ಆಡಳಿತ ಮಂಡಳಿ, ಸಂಸ್ಕೃತಿ ಸೇವಾ ಟ್ರಸ್ಟ್‌ನ ಸದಸ್ಯರು, ಮಹಾನಗರ ಪಾಲಿಕೆ ಸಿಬ್ಬಂದಿ ಹಾಗೂ ಸುತ್ತಮುತ್ತಲಿನ ನಿವಾಸಿಗಳು ಭಾಗವಹಿಸಿ, ಬಾವಿಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ ಮಾದರಿ ಕಾರ್ಯಕ್ಕೆ ಕಾರಣರಾದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

## M.Com

ಎಂ.ಕಾಂ (Master of Commerce - M.Com) ಎಂಬುದು 2 ವರ್ಷಗಳ (4 ಸೆಮಿಸ್ಟರ್‌ಗಳು) ಸ್ನಾತಕೋತ್ತರ ವಾಣಿಜ್ಯ ಪದವಿಯಾಗಿದ್ದು, ಹಣಕಾಸು, ಲೆಕ್ಕಪತ್ರ ನಿರ್ವಹಣೆ, ತೆರಿಗೆ ಮತ್ತು ವ್ಯವಹಾರ ನಿರ್ವಹಣೆಯಲ್ಲಿ ಸುಧಾರಿತ ಜ್ಞಾನವನ್ನು ನೀಡುತ್ತದೆ. ಬಿ.ಕಾಂ/ಬಿಬಿಎನಲ್ಲಿ ಕನಿಷ್ಠ 50% ಅಂಕಗಳೊಂದಿಗೆ ಉತ್ತೀರ್ಣರಾದವರು ಅರ್ಹರು. ಇದು ಬ್ಯಾಂಕಿಂಗ್, ಅಕೌಂಟಿಂಗ್, ಮತ್ತು ಕಾರ್ಪೊರೇಟ್ ವಲಯಗಳಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ Shiksha.com, Careerindia Kannada.
ಎಂ.ಕಾಂ ಕೋರ್ಸ್ ಪ್ರಮುಖ ವಿವರಗಳು (M.Com Course Details in Kannada):
ಕೋರ್ಸ್ ಹೆಸರು: ಮಾಸ್ಟರ್ ಆಫ್ ಕಾಮರ್ಸ್ (M.Com)
ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು)
ಅರ್ಹತೆ:ಬಿ.ಕಾಂ (B.Com),©©J(BBA)ಅಥವಾ ಸಂಬಂಧಿತ ಪದವಿಯಲ್ಲಿ ಕನಿಷ್ಠ 50% ಅಂಕಗಳು (ಪರಿಶಿಷ್ಟ ವರ್ಗಗಳಿಗೆ 45%)
ಪ್ರವೇಶ ಪ್ರಕ್ರಿಯೆ: ಮೆರಿಟ್ ಆಧಾರಿತ (ಪದವಿ ಅಂಕಗಳು) ಅಥವಾ CUET-PG, ಅಕಉಇಖ, ಒಂಉ ಅಇಖ ನಂತಹ ಪ್ರವೇಶ ಪರೀಕ್ಷೆಗಳು
ಕಲಿಯುವ ವಿಷಯಗಳು: ಅಕೌಂಟಿಂಗ್, ಫೈನಾನ್ಸ್, ಟ್ಯಾಕ್ಸೇಷನ್, ಸ್ಟ್ರಾಟೆಜಿಕ್ ಮ್ಯಾನೇಜ್ಮೆಂಟ್, ಎಕನಾಮಿಕ್ಸ್
ಸರಾಸರಿ ಶುಲ್ಕ: ವಾರ್ಷಿಕ ₹1,000 ರಿಂದ ₹12.4 ಲಕ್ಷದವರೆಗೆ (ಕಾಲೇಜಿನ ಆಧಾರದ ಮೇಲೆ)
ಉದ್ಯೋಗಾವಕಾಶಗಳು: ಫೈನಾನ್ಷಿಯಲ್ ಅನಲಿಸ್ಟ್, ಟ್ಯಾಕ್ಸ್ ಕನ್ಸಲ್ಟೆಂಟ್, ಆಡಿಟರ್, ಪ್ರೊಫೆಸರ್, ಬ್ಯಾಂಕ್ ಮ್ಯಾನೇಜರ್ Careerindia Kannada +4
ಹೆಚ್ಚಿನ ವ್ಯಾಪ್ತಿ: ಅಂ, ಅಖ, ಅಥವಾ ಅಒಂ ಓದುತ್ತಿರುವವರಿಗೆ ಈ ಕೋರ್ಸ್ ಹೆಚ್ಚಿನ ಸಹಕಾರಿಯಾಗಿದೆ
ಉನ್ನತ ಕಾಲೇಜುಗಳು: ದೆಹಲಿ ವಿಶ್ವವಿದ್ಯಾಲಯ, ಕ್ರೈಸ್ಟ್ ಯುನಿವರ್ಸಿಟಿ, ಜೈನ್ ಯುನಿವರ್ಸಿಟಿ Shiksha.com
ಮುಖ್ಯ ವಿಷಯಗಳು (Syllabus Highlights):
ಹಣಕಾಸು ನಿರ್ವಹಣೆ (Financial Management)
ಆಧುನಿಕ ಲೆಕ್ಕಪತ್ರ ನಿರ್ವಹಣೆ (Advanced Accounting)
ಕಾರ್ಪೊರೇಟ್ ತೆರಿಗೆ (Corporate Tax)
ಸಂಶೋಧನಾ ವಿಧಾನಗಳು (Research Methodology

## ನಿಖರ ಜನಗಣತಿಯಿಂದ ದೇಶದ ಭವಿಷ್ಯದ ಅಭಿವೃದ್ಧಿ ಸಾಧ್ಯ: ತಹಶೀಲ್ದಾರ್ ಪ್ರಕಾಶ ಹೊಳೆಪ್ಪಗೋಳ

ನೈಜ್ಯ ದೆಸೆ ನ್ಯೂಸ್



ರಾಮದುರ್ಗ: ಭಾರತದ ಭವಿಷ್ಯದ ಹತ್ತು ವರ್ಷಗಳ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಜನಗಣತಿಯ ದತ್ತಾಂಶವು ಅತ್ಯಂತ ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಮನೆ ಅಥ-ವಾ ಕುಟುಂಬವು ಗಣತಿಯಿಂದ ಹೊರಗುಳಿಯದಂತೆ ಸಿಬ್ಬಂದಿಗಳು ಜಾಗೃತಿ ವಹಿಸಬೇಕು ಎಂದು ತಹಶೀಲ್ದಾರ್ ಪ್ರಕಾಶ ಹೊಳೆಪ್ಪಗೋಳ ಅವರು ಕರೆ ನೀಡಿದರು.ಇಲ್ಲಿನ ಐ.ಎಸ್. ಯಾದವಾಡ ಸರ್ಕಾರಿ ಪ್ರಥ-ಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಗಣತಿದಾರರು ಮತ್ತು ಮೇಲ್ವಿಚಾರಕರ 9 ದಿನಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.ತಾಲ್ಲೂಕಿನ ಗ್ರಾಮೀಣ ವ್ಯಾಪ್ತಿಯ 451 ಗಣತಿದಾರರು, 80 ಮೇಲ್ವಿಚಾರಕರು ಹಾಗೂ ಪಟ್ಟಣ ವ್ಯಾಪ್ತಿಯ 74 ಗಣತಿದಾರರು ಮತ್ತು 13 ಮೇಲ್ವಿಚಾರಕರು ಸೇರಿದಂತೆ ಒಟ್ಟು 798 ಸಿಬ್ಬಂದಿ ತರಬೇತಿಯಲ್ಲಿ ಪಾಲ್ಗೊಂಡಿದ್ದಾರೆ.ಜನಗಣತಿ ಕಾರ್ಯಕ್ರಮವನ್ನು ದೋಷರಹಿತವಾಗಿ ಮತ್ತು ಯಶಸ್ವಿಯಾಗಿ ಪೂರ್ಣಗೊಳಿಸಲು ಸಿಬ್ಬಂದಿಗಳಿಗೆ ಅಗತ್ಯ ತಾಂತ್ರಿಕ ಮತ್ತು ಪ್ರಾಯೋಗಿಕ ಜ್ಞಾನ ನೀಡುವುದು ಈ ಕಾರ್ಯಾಗಾರದ ಮುಖ್ಯ ಉದ್ದೇಶವಾಗಿದೆ.ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಪ್ರತಿಯೊಬ್ಬ ಮತದಾರರನ್ನು ಹಾಗೂ ನಿವಾಸಿಗಳನ್ನು ಕಟ್ಟುನಿಟ್ಟಾಗಿ ಗಣತಿಗೆ ಒಳಪಡಿಸಲು ನಿರ್ಧರಿಸಲಾಗಿದ್ದು, ಸಿಬ್ಬಂದಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ತಹಶೀಲ್ದಾರರು ಸೂಚಿಸಿದರು.ಈ ಸಂದರ್ಭದಲ್ಲಿ ಪುರಸಭೆಯ ಮುಖ್ಯಾಧಿಕಾರಿ ಈರಣ್ಣ ಗುಡದಾರಿ, ಮಾಸ್ಟರ್ ಟ್ರೇನರ್‌ಗಳಾದ ಎ.ವಿ. ಪಾಟೀಲ, ಸುರೇಶ ಅಣ್ಣಿಗೇರಿ, ಪ್ರಕಾಶ ತೆಗ್ಗಿಹಳ್ಳಿ, ಮಂಜುಳಾ ಮೂಡ್ಲವರ, ಎಂ.ಎನ್. ಭಜಂತ್ರಿ ಹಾಗೂ ಎಸ್.ಐ. ಹೊಸೂರ ಉಪಸ್ಥಿತರಿದ್ದರು. ಸುರೇಬಾನ ಕಂದಾಯ




# ಬಾಬು ಜಗಜೀವನ್ ರಾಮ್ ಬಡ ಜನರ ಹಸಿವು ನೀಗಿಸಿದ ಮಹಾನ್ ವ್ಯಕ್ತಿ : ಬಸವಣೆಪ್ಪ ಕಲಶೆಟ್ಟಿ

ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು : ಏ 5 – ಸ್ವಾತಂತ್ರ್ಯದ ನಂತರ ದೇಶದಲ್ಲಿ ಜನರು ಹಸಿವಿನಿಂದ ಕಂಗಾಲಾದ ಸಂದರ್ಭದಲ್ಲಿ ದೇಶದ ಬಡಜನರ ಹಸಿವುವನ್ನು ನೀಗಿಸಿದ ಮಹಾನ್ ವ್ಯಕ್ತಿ ಡಾ.ಬಾಬು ಜಗಜೀವನ್ ರಾಮ್ ಎಂದು ಸಹಾಯಕ ಆಯುಕ್ತ ಬಸವಣಪ್ಪ ಕಲಶೆಟ್ಟಿ ಹೇಳಿದರು. ಅವರಿಂದು ಪಟ್ಟಣದ ಡಾ.ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ರವರ 119 ನೇ ಜನ್ಮ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 1947ರಲ್ಲಿ ಬ್ರಿಟಿಷರು ಭಾರತವನ್ನು ಲೂಟಿ ಮಾಡಿದ್ದ-ರಿಂದ ಬಡತನ,ಅನಕ್ಷರತೆ ತಾಂಡವಾಡುತ್ತಿತ್ತು. ಅಂತಹ ಸಂದರ್ಭದಲ್ಲಿ ದೇಶದ ಉಪ ಪ್ರಧಾನಿ ಹುದ್ದೆಗೇರಿದ ಅವರು ದೇಶದಲ್ಲಿ ಹೊಸ ಕ್ರಾಂತಿಯನ್ನು ಮಾಡಿ ಬಡಜನರ ಹಸಿವು ದೂರ ಮಾಡಿದ ಮಹಾನ್ ವ್ಯಕ್ತಿ ಎಂಬ ಕೀರ್ತಿ ಅವರಿಗೆ ಸಲ್ಲುತ್ತದೆ. 1974 ರಲ್ಲಿ ರಕ್ಷಣಾ ಮಂತ್ರಿಯಾಗಿದ್ದ ಬಾಬು ಜಗಜೀವನ್ ರಾಮ್ ರವರು ಪಾಕಿಸ್ತಾನವನ್ನು ಸೋಲಿಸಿ ಬಾಂಗ್ಲಾದೇಶ ಎಂಬ ಹೊಸ ದೇಶವನ್ನು ಸ್ಥಾಪಿಸಿದವರು ಎಂದರು.ನಂತರ ಮಾತನಾಡಿದ ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಪಾಮಯ್ಯ ಮುರಾರಿ ಈ ದೇಶದ ಸಂವಿಧಾನ ಬರೆದವರು ಡಾ.ಬಿ.ಆರ್.ಅಂಬೇಡ್ಕರ್ ರಾದರೆ ಅದನ್ನು ಸಂಪೂರ್ಣವಾಗಿ ಅನುಷ್ಠಾನ ತಂದವರು ಡಾ.ಬಾಬು ಜಗಜೀವನ್ ರಾಮ್ ಎಂದರು ಬಡಜನರ ಹಸಿವು ನೀಗಿಸಿದವರು.ಉಪನ್ಯಾಸ ನೀಡಿದ ನಾರಾಯಣ ಬೆಳಕುರ್ಕಿ ಯವರು 45 ವರ್ಷಗಳ ಕಾಲ ಭಾರತವನ್ನು ಅಭಿವೃದ್ಧಿ ಪತದತ್ತ ಮುನ್ನೆಡೆಸಿದವರು ಡಾ.ಬಾಬು ಜಗಜೀವನ್ ರಾಮ್ ರವರು. ಸರ್ವ ಧರ್ಮ ಸಮನ್ವಯವನ್ನು ಅನುಸರಿಸಿದವರು. ಡಾ. ಬಿ ಆರ್ ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ್ ರಾಮ್ ರವರು ಶೋಷಿತ, ದಲಿತ, ಹಿಂದುಳಿದ ಅಲ್ಪಸಂಖ್ಯಾತರ ದೌರ್ಜನ್ಯಕ್ಕೆ ಒಳಗಾದವರು , ಅವರಿಬ್ಬರು ಬಡವರ ಅಸ್ಪೃಶ್ಯರ ಎರಡು ಕಣ್ಣುಗಳು ಇದ್ದಂತೆ ಎಂದರು. ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಅಮರೇಶ ಹೆಸರೂರು, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವೆಂಕಟೇಶ ಗುತ್ತೆದಾರ, ಪೊಲೀಸ್ ಉಪ ಅಧೀಕ್ಷಕ ದತ್ತಾತ್ರೇಯ ಕರ್ನಾಡ, ತಹಶೀಲ್ದಾರ್ ಸತ್ಯಮ್ಮ, ಇ ಓ ಉಮೇಶ, ಪಿಐ ಹೊಸಕೇರಪ್ಪ, ಬಿಇಓ ಸುಜಾತ ಹೂನೂರು, ಸಿಡಿಪಿಓ ನಾಗರತ್ನ, ಸಮಾಜ ಕಲ್ಯಾಣ ಅಧಿಕಾರಿ ರವೀಂದ್ರ ಉಪ್ಪಾರ್, ಮಹಾದೇವಪ್ಪ, ರಮೇಶ ಗೋಸ್ಥೆ, ರುದ್ರಪ್ಪ ಬ್ಯಾಗಿ, ಗ್ಯಾನಪ್ಪ ಕಟ್ಟಿಮನಿ, ಮೋಹನ್ ಗೋಸ್ಥೆ ಸೇರಿ ಇತರರು ಇದ್ದರು.

# ದೇವದುರ್ಗ: ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ತಾತ್ಕಾಲಿಕ ಪಟ್ಟಿ ಪ್ರಕಟ ; ಆಕ್ಷೇಪಣೆ ಸಲ್ಲಿಸಲು ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್



ರಾಯಚೂರು ಏಪ್ರಿಲ್ 05 (ಕರ್ನಾಟಕ ವಾರ್ತೆ): ಜಿಲ್ಲೆಯ ದೇವದುರ್ಗ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿ-ತ್ತು. 27 ಅಂಗನವಾಡಿ ಕಾರ್ಯಕರ್ತೆಯರ ಹುದ್ದೆ ಮತ್ತು 76 ಸಹಾಯಕಿಯರ ಖಾಲಿ ಇದ್ದ ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯು ಅರ್ಹ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿರುವದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಆಕ್ಷೇಪಣೆಗಳು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಆಕ್ಷೇಪಣೆ ಅರ್ಜಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ: 04.04.2026 ರಿಂದ 13.04.2026 ರೊಳಗೆ ಸಮಯ ಬೆಳಿಗ್ಗೆ 08:00 ಗಂಟೆಯಿಂದ ಮಧ್ಯಾಹ್ನ 01.30ರವರೆಗೆ ಸಲ್ಲಿಸಬಹುದಾಗಿದೆ. ಆಕ್ಷೇಪಣೆ ಸಲ್ಲಿಸುವವರು ಆಕ್ಷೇಪಣೆ ಅರ್ಜಿಯ ಜೊತೆಗೆ ಯಾವುದೇ ದಾಖಲಾತಿಗಳು ಸಲ್ಲಿಸದಿದ್ದಲ್ಲಿ ಅಂಥವರ ಆಕ್ಷೇಪಣೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾ-ರಿಗಳ ಕಾರ್ಯಾಲಯ ಡಾ.ಅರಷಿಣಿಗಿ ಬಿಲ್ಡಿಂಗ್ ನಗರಗುಂಡ ರೋಡ್, ದೇವದುರ್ಗ ಇಲ್ಲಿ ಸಂಪರ್ಕಿಸಬಹುದಾಗಿದೆ ಎಂದು ದೇವದುರ್ಗ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹೇಶ ನಾಯಕ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 22 ವರ್ಷಗಳ ಸೇನಾ ಸೇವೆಗೆ ಜನರ ಕೃತಜ್ಞತೆ

## ವ್ಯಕ್ತ ಯೋಧರು, ರೈತರು, ಶಿಕ್ಷಕರಿಗೆ ಗೌರವ ಅಗತ್ಯ: ಶಾಸಕ

ನೈಜ್ಯ ದೆಸೆ ನ್ಯೂಸ್



ಮಾನ್ವಿ : ತಾಲೂಕಿನ ದೇವಿಪುರ ಗ್ರಾಮದ ದ್ಯಾವಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಭಾರತೀಯ ಸೇನೆಯ ಗಡಿ ಭದ್ರತಾ ಪಡೆಯಲ್ಲಿಯ 22 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ವೀರ ಯೋಧ ಮಲ್ಲಯ್ಯನಾಯಕ ಪೆದರಡ್ಡಿ ಅವರನ್ನು ಗ್ರಾಮಸ್ಥರು ಹಾಗೂ ಶಾಸಕ ಹಂಪಯ್ಯನಾಯಕ, ಸಂಸದ ಜಿ.ಕುಮಾರನಾಯಕ ಆತ್ಮೀಯವಾಗಿ ಸ್ವಾಗತಿಸಿದರು. ವೇದಿಕೆಯಲ್ಲಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಹಂಪಯ್ಯನಾಯಕ ದೇಶದ ಭದ್ರತೆಗಾಗಿ ದುಡಿಯುವ ಯೋಧರು, ಅನ್ನದಾತರಾದ ರೈತರು ಮತ್ತು ಸಮಾಜವನ್ನು ರೂಪಿಸುವ ಶಿಕ್ಷಕರಿಗೆ ಗೌರವ ಸಲ್ಲಿಸುವುದು ನಮ್ಮ ಎಲ್ಲರ ಪ್ರಮುಖ ಕರ್ತವ್ಯವಾಗಿದೆ ಎಂದು ಹೇಳಿದರು.ಮುಂದುವರಿದು ಮಾತನಾಡಿದ ಸಂಸದ ಜಿ.ಕುಮಾರನಾಯಕ ನಿವೃತ್ತ ಯೋಧ-ರಿಗೆ ಸರ್ಕಾರದಿಂದ ದೊರೆಯುವ ನಿವೃತ್ತ ವೇತನ, ಕೃಷಿ ಭೂಮಿ ಸೇರಿದಂತೆ ವಿವಿಧ ಸೌಲಭ್ಯಗಳು ಸಕಾಲದಲ್ಲಿ ಲಭ್ಯವಾಗುವಂತೆ ಸದನದಲ್ಲಿ ಒತ್ತಾಯಿಸುವುದಾಗಿ ತಿಳಿಸಿದರು. ಯೋಧರು ತಮ್ಮ ಜೀವನವನ್ನೇ ದೇಶಕ್ಕೆ ಅರ್ಪಿಸಿದವರು; ಅವರು ನಿವೃತ್ತರಾದ ಬಳಿಕ ಗ್ರಾಮಗಳಿಗೆ ಬಂದಾಗ ತಾಲೂಕು ಆಡಳಿತದಿಂದ ಗೌರವಿಸುವ ಮೂಲಕ ಯುವಕರಲ್ಲಿ ದೇಶಭಕ್ತಿ ಮೂಡಿಸುವ ಕೆಲಸವಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಉಟಕನೂರು ಅಡವಿಸಿದ್ದೇಶ್ವರ ಸಂಸ್ಥಾನಮಠದ ಮರಿಬಸವಲಿಂಗ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು, ಸಿಂಧನೂರು ವೆಂಕಟಗಿರಿ ಕ್ಯಾಂಪಿನ ಸದಾನಂದಶರಣ-ರು ಆಶೀರ್ವಚನ ನೀಡಿದರು. ಮುಖಂಡರಾದ ಬಿ.ಮಾನಪ್ಪ ನಾಯಕ, ರಾಜಾ ಶ್ಯಾಮಸುಂದರ್ ನಾಯಕ (ವಕೀಲರು), ರಾಗಮಪರ್ವಿ ತಿಮ್ಮಯ್ಯನಾಯಕ, ಡಾ.ಬಸವರಾಜಪ್ಪ ಪೋತ್ನಾಳ, ಹನುಮಂತಪ್ಪ (ವಕೀಲರು, ದೇವಿಪುರ), ಬಿ.ಸಿ.ಎಂ ಅಧಿಕಾರಿ ಬಾಗಯ್ಯ ನಾಯಕ, ಮಾಜಿ ಗ್ರಾಪಂ ಅಧ್ಯಕ್ಷರಾದ ಬಾಲಯ್ಯ ನಾಯಕ, ಅಂಬಣ್ಣ ನಾಯಕ, ಆಂಜನೇಯ (ನಸ್ಲಾಪುರ), ಜಿಲ್ಲಾ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಮೂರ್ತಿ ಕಲ್ಲೂರು, ತಾಲೂಕು ಅಧ್ಯಕ್ಷ ಬಸವರಾಜ ನಾಯಕ ಮುಷ್ಟೂರು, ನಿವೃತ್ತ ಯೋಧ ಆಂಜನೇಯ ನಾಯಕ (ನೀರಮಾನ್ವಿ) ಸೇರಿದಂತೆ ಅನೇಕರು ಹಾಗೂ ಗ್ರಾಮಸ್ಥರು ಭಾಗವಹಿಸಿದರು.ಇದಕ್ಕೂ ಮುನ್ನ ನೀರಮಾನ್ವಿ ಗ್ರಾಮದ ಶ್ರೀ ರೇಣುಕ ಯಲ್ಲಮ್ಮ ದೇವಸ್ಥಾನದ ಬಳಿ ವೀರ ಯೋಧರನ್ನು ತಾಲೂಕಿಗೆ ಸ್ವಾಗತಿಸಲಾಯಿತು. ಅಲ್ಲಿಂದ ಮಾನ್ವಿ ಪಟ್ಟಣ ಹಾಗೂ ಹಿರೇಕೋಟ್ನೆಕಲ್ ಮಾರ್ಗವಾಗಿ ತೆರೆದ ಜೀಪಿನಲ್ಲಿ ನೂರಾರು ಅಭಿಮಾನಿಗಳೊಂದಿಗೆ ಮೆರವಣಿಗೆ ನಡೆಸಿ ದೇವಿಪುರ ಗ್ರಾಮಕ್ಕೆ ಕರೆತರಲಾಯಿತು.